ಗುಳೇದಗುಡ್ಡ ಕ್ಷೇತ್ರದ ಆಸಂಗಿ ಬ್ಯಾರೇಜ್ ನಿರ್ಮಾಣ.

286(1915) ಶ್ರೀ ರಾಜಶೇಖರ ವಿ. ಶೀಲವಂತ (ಗುಳೇದಗುಡ್ಡ) :— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಗುಳೇದಗುಡ್ಡ ಮತಕ್ಷೇತ್ರದ ಆಸಂಗಿ ಬ್ಯಾರೇಜ್ ನಿರ್ಮಾಣಕ್ಕೆ ಇದುವರೆಗೆ ಖರ್ಚಾದ ಹಣವೆಷ್ಟು; ಬ್ಯಾರೇಜ್ ನಿರ್ಮಾಣ ಕಾರ್ಯ ಸದ್ಯ ಯಾವ ಹಂತದಲ್ಲಿದೆ

ಆ) ಬ್ಯಾರೇಜ್ ನಿರ್ಮಾಣದಲ್ಲಿ ಸಿಮೆಂಟ್ ಕೆಲಸಕ್ಕೆ ಖರ್ಚಾದ ಹಣ ಎಷ್ಟು ಹಾಗೂ ಗೇಟು ಮತ್ತು ಚಾನಲ್ ಕೆಲಸಗಳಿಗೆ ಖರ್ಚಾದ ಹಣವೆಷ್ಟು ;

ಇ) ಸದರಿ ಬ್ಯಾರೇಜ್‌ನಿಂದ ಬಾದಿತರಾದವರ ಜಮೀನುಗಳಿಗೆ ಪರಿಹಾರ ಕೊಡಲಾಗಿದೆಯೇ ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು? ಯಾವಾಗ ನೀಡಲಾಗುವುದು

ಈ) ಸದರಿ ಬ್ಯಾರೇಜು ನಿರ್ಮಾಣ ಕಾರ್ಯವನ್ನು ಯಾವಾಗ ಪೂರೈಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :—

ಅ) ಗುಳೇದಗುಡ್ಡ ಮತಕ್ಷೇತ್ರದಲ್ಲಿ ಆಸಂಗಿ ಬ್ಯಾರೇಜ್‌ನ ನಿರ್ಮಾಣಕ್ಕೆ ಮೇ 1999ರ ಅಂತ್ಯದವರೆಗೆ ರೂ. 93.64 ಲಕ್ಷ ಖರ್ಚು ಮಾಡಲಾಗಿದೆ. ಸದರಿ ಕಾಮಗಾರಿಗಾಗಿ ತಳಪಾಯ ಕೆಲಸ ಮುಗಿಯುವ ಹಂತದಲ್ಲಿದ್ದು ಪಿಯರ್ಸ್‌ಗಳನ್ನು ಎತ್ತರಿಸುವ ಕೆಲಸ ಪ್ರಾರಂಭಿಸಲಾಗಿದೆ.

ಆ) ಬ್ಯಾರೇಜ್ ನಿರ್ಮಾಣದಲ್ಲಿ ಸಿಮೆಂಟ್ ಕೆಲಸಕ್ಕೆ ಇದುವರೆಗೆ ರೂ. 35.66 ಲಕ್ಷ ಖರ್ಚಾಗಿರುತ್ತದೆ. ಅದರಂತೆ ಗೇಟ್ ಹಾಗೂ ಚಾನಲ್‌ಗಳಿಗಾಗಿ ರೂ. 24.21 ಲಕ್ಷ ಖರ್ಚಾಗುತ್ತದೆ.

ಇ) ಸದರಿ ಕಾಮಗಾರಿಯ ನೀರಿನ ಸಂಗ್ರಹಣೆಯನ್ನು ನದಿಯ ದಂಡೆಯ ನದಿಯವರೆಗೆ ಬರುವಂತೆ ನಿರ್ಮಿಸಲಾಗುತ್ತಿದೆ. ಹೀಗಾಗಿ ಜಮೀನುಗಳನ್ನು ಸ್ವಾಧೀನಪಡಿಸಿ ಪರಿಹಾರ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದಾಗ್ಯೂ ಅಪ್ರೋಚ್ ರಸ್ತೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು 6(1) ಹಂತದಲ್ಲಿದೆ. ಇದಕ್ಕಾಗಿ 12/98 ರಲ್ಲಿ ರೂ. 2.78 ಲಕ್ಷ ಮುಂಗಡ ಹಣ ಕಂದಾಯ ಇಲಾಖೆಗೆ ಜಮಾ ಮಾಡಲಾಗಿದೆ. ಭೂ ಸ್ವಾಧೀನತೆಗಾಗಿ ತೀರ್ಪು ಮುಗಿದ ನಂತರ ಕಂದಾಯ ಇಲಾಖೆಯಿಂದ ಪರಿಹಾರ ನೀಡಲಾಗುವುದು.

ಈ) ಈ ಬ್ಯಾರೇಜ್‌ನ ನಿರ್ಮಾಣ ಕಾರ್ಯವನ್ನು ಮಾರ್ಚ್ 2000ನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಶ್ರೀ ರಾಜಶೇಖರ್ ವಿ. ಶೀಲವಂತ :— ಸನ್ಮಾನ್ಯ ಅಧ್ಯಕ್ಷರೆ, ಸಿಮೆಂಟ್ ಮತ್ತು ಗೇಟ್‌ಗೆ ಎಷ್ಟು ಹಣ ಖರ್ಚು ಮಾಡಿದ್ದೀರೆಂದು ಕೇಳಿದ್ದೇನೆ. 93.64 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಈ ಗೇಟ್ ಮತ್ತು ಸಿಮೆಂಟ್ ವರ್ಕ್ ಹಿಡಿದರೆ 59.87 ಲಕ್ಷ ಆಗುತ್ತದೆ. ಇನ್ನೂ 33.77 ಲಕ್ಷ ಯಾವ್ಯಾವ ಐಟಂಗಳಿಗೆ ಖರ್ಚು ಮಾಡಿದ್ದಾರೆಂದು ತಿಳಿಸಬೇಕು. ಅದರ ಜೊತೆಗೆ 1993-94 ನೇ ಇಸವಿಯಿಂದ ಹಿಡಿದು ಆ ಆಸಂಗಿ ಬ್ಯಾರೇಜ್ ಕೆಲಸವನ್ನು ಇಲಾಖೆಯ ವತಿಯಿಂದ ಶುರು ಮಾಡಿದರು. ಹಾಗೆ ಶುರು ಮಾಡಿದಂತಹ ಸಂದರ್ಭದಲ್ಲಿ, ಆ ಎಡದಂಡೆ ಮೇಲೆ ಅಪ್ರೋಚ್ ರೋಡ್ ಮತ್ತು ಅಲ್ಲಿ ಮೆಟೀರಿಯಲ್ಸ್ ಕಲೆಕ್ಷನ್ಸ್‌ಗೆ ಅಲ್ಲಿದ್ದಂತಹ ಗ್ರಾಮಸ್ಥರ ಹೊಲದಲ್ಲಿ ಸ್ಟೋರ್ ಮಾಡಿಕೊಂಡರು. ಅಲ್ಲಿಂದ ಇಲ್ಲಿಯವರೆಗೆ ಸುಮಾರು ವರ್ಷಗಳವರೆಗೆ ಹೊಲ ಖಾಲಿ ಬಿಟ್ಟು ಅವರಿಗೆ ಬಿತ್ತಲು ಆಗಲಿಲ್ಲ, ಅವರಿಗೆ ತೊಂದರೆ ಆಯಿತು. ಈಗೇನು 2.78 ಲಕ್ಷ ರೂಪಾಯಿಗಳನ್ನು ಕಂದಾಯ ಇಲಾಖೆಗೆ ಕೊಟ್ಟಿದ್ದೇವೆ, ಅದನ್ನು ಅವರು ಕೊಡುತ್ತಾರೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಆದರೆ ಇಲಾಖೆ ವತಿಯಿಂದಲೇ ತಡ ಆಗಿದ್ದರ ಸಲುವಾಗಿ ಅವರಿಗೆ ಇಂಟರೆಸ್ಟ್ ಹಾಕಿ ಕಂಪೆನ್ಸೇಷನ್ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ :— ಸನ್ಮಾನ್ಯ ಅಧ್ಯಕ್ಷರೇ, ಈ ಕೆಲಸಕ್ಕೆ ಅಲ್ಲಿ ನೀರು ನಿಲ್ಲುವಂತಹ ಜಾಗದಲ್ಲಿ ಬರೇ ನೀರು ನಿಲ್ಲುತ್ತದೆ. ನಾವು ಜಮೀನನ್ನು ಅಕ್ವೈರ್ ಮಾಡಿಕೊಳ್ಳುವ ಪರಿಸ್ಥಿತಿ ಬರುವುದು ರಸ್ತೆಗೆ ಮಾತ್ರ. ನಾವು ಆಗಲೇ ಅದಕ್ಕೆ 4(1) ನೋಟಿಫಿಕೇಷನ್, 6(1) ನೋಟಿಫಿಕೇಷನ್ ಪೂರ್ತಿ ಮಾಡಿದ್ದೇವೆ. ಈಗ ಇದನ್ನು ಪೂರ್ತಿ ಮಾಡಿ ನಾವು ರೆವಿನ್ಯೂ ಅಧಿಕಾರಿಗಳಿಗೆ ಹಣವನ್ನೂ ತುಂಬಿದ್ದೇವೆ. ಈಗ ಸನ್ಮಾನ್ಯ ಸದಸ್ಯರು ಏನು ಹೇಳುತ್ತಾರೆಂದರೆ ಇದು ತಡ ಆಗಿರುವುದರಿಂದ ಇದಕ್ಕೆ ಬಡ್ಡಿ ಸಹ ಕೊಡಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೀರಿ. ಇದನ್ನು ನಾನು ಪರಿಶೀಲನೆ ಮಾಡಿ ಅವರಿಗೆ ಸಮಂಜಸವಾದಂತಹ ಉತ್ತರವನ್ನು ಕೊಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ರಾಜಶೇಖರ ವಿ. ಶೀಲವಂತ :— ಅದರ ಜೊತೆಗೆ ರಸ್ತೆಗೆ ಅಷ್ಟೇ ಸೀಮಿತ ಅಲ್ಲ. ಮೆಟೀರಿಯಲ್ಸ್ ಕಲೆಕ್ಷನ್ಸ್ ಟೆಂಪರರಿಯಾಗಿ ಮಾಡಿದ್ದಾರೆ. ಅವರಿಗೆ ಸಹ ಕಂಪನ್ಸೇಷನ್ ಕೊಡಬೇಕಾಗಿದೆ. ಮಾನ್ಯ ಮಂತ್ರಿಯವರು ಅದನ್ನು ಕೂಡಿಸಿಕೊಂಡು ಹೇಳಲಿಲ್ಲ. ಅದಕ್ಕೆ ನಾನು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಡಿಪಾರ್ಟ್‌ಮೆಂಟ್‌ನಿಂದ ಮೆಟೀರಿಯಲ್ ಕಲೆಕ್ಷನ್ಸ್‌ಗೋಸ್ಕರ 1994ನೇ ಇಸವಿಯಿಂದ ಹಿಡಿದು ಇಲ್ಲಿಯವರೆಗೆ ಸಾಕಷ್ಟು ಹೊಲವನ್ನು ಅಕ್ವೈರ್ ಮಾಡಿಕೊಂಡಿದ್ದರು. ನೀವು ಟೆಂಪರರಿಯಾಗಿ ಎಲ್ಲಿಯವರೆಗೆ ಅಲ್ಲಿ ಮೆಟೀರಿಯಲ್ಸ್ ಕಲೆಕ್ಷನ್ಸ್ ಮಾಡಿದ್ದೀರಿ, ಅಷ್ಟು ವರ್ಷಕ್ಕೆ ಕಂಪನ್ಸೇಷನ್ಸ್ ಅವರಿಗೆ ಕೊಡಬೇಕಾಗುತ್ತದೆ. ಅದನ್ನು ತಾವು ಹೇಳಲಿಲ್ಲ.

ಶ್ರೀ ತಿಪ್ಪೇಸ್ವಾಮಿ :— ನಾವು ಕಂಪೆನ್ಸೇಷನ್ ಕೊಡಬೇಕಾಗಿರುವುದು, ಶಾಶ್ವತವಾಗಿ ನಾವು ತೆಗೆದುಕೊಂಡಂತಹ ಭೂಮಿಗೆ ಪರಿಹಾರ ಕೊಡುತ್ತೇವೆಯೇ ವಿನಹ ಎರಡು ದಿನ

ಅಲ್ಲಿ ಮೆಟೀರಿಯಲ್ಸ್ ಹಾಕಿಕೊಂಡಿದ್ದಕ್ಕೆ ನಾವು ಪರಿಹಾರ ಕೊಡುವಂತಹ ಪರಿಸ್ಥಿತಿ ಬರುವುದಿಲ್ಲ ಎಂಬುದು ನನ್ನ ಅನಿಸಿಕೆ.

ಶ್ರೀ ರಾಜಶೇಖರ ವಿ. ಶೀಲವಂತ :— ಸನ್ಮಾನ್ಯ ಅಧ್ಯಕ್ಷರೆ, ಐದು ವರ್ಷದವರೆಗೆ ಅಲ್ಲಿ ಮೆಟೀರಿಯಲ್ಸ್ ಕಲೆಕ್ಷನ್ಸ್ ಮಾಡಿದ್ದಾರೆ. ಐದು ವರ್ಷದವರೆಗೆ ಅವನ ಪೀಕ್ ಏನಾಯಿತು? ಹಾಳಾಗಿ ಹೋಯಿತು. ಯಾರ್ಯಾರು ವ್ಯಕ್ತಿಗಳು ಕೊಟ್ಟಿದ್ದರೋ ಆ ವ್ಯಕ್ತಿಗಳೆಲ್ಲಾ ಹಾಳಾಗಿ ಹೋದರು. ಅವರಿಗೆ ಮೊದಲು ಇವರ ಇಲಾಖೆಯವರು 'ನಾವು ನಿಮಗೆ ಕಂಪೆನ್ಸೇಷನ್ ಕೊಡುತ್ತೇವೆಂದು ತಿಳಿಸಿದ್ದಾರೆ. ಈಗ ಕಂಪೆನ್ಸೇಷನ್ ಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಬಹಳ ಸಮಸ್ಯೆ ಆಗುತ್ತದೆ.

ಅಧ್ಯಕ್ಷರು :— ಅದನ್ನು ಎಲ್ಲಿ ಬರೆದು ಕೊಟ್ಟಿದ್ದಾರೆ, ತಂದು ತೋರಿಸಿ. ಮಾನ್ಯ ಮಂತ್ರಿಗಳಿಗೆ ಹೇಳೋಣ.

ಧಾರವಾಡ, ಹಾವೇರಿ ಹಾಗೂ ಗದಗ ಜಿಲ್ಲೆಗಳಲ್ಲಿ ಕೆರೆಗಳ ಹೂಳು ತೆಗೆಯುವ ಕಾರ್ಯ.

295(1790) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) :— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧಾರವಾಡ, ಹಾವೇರಿ ಮತ್ತು ಗದಗ್ ಜಿಲ್ಲೆಗಳಲ್ಲಿ ಇರುವ ಕೆರೆಗಳ ಸಂಖ್ಯೆ ಎಷ್ಟು; ಹಾಗೂ ಈ ಕೆರೆಗಳಲ್ಲಿನ ಹೂಳನ್ನು ತೆಗೆಯಿಸಲಾಗಿದೆಯೇ? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಹಾಗಿದ್ದಲ್ಲಿ ಈ ಕೆರೆಗಳಲ್ಲಿನ ಹೂಳನ್ನು ತೆಗೆಯಿಸಲು ಖರ್ಚಾದ ಹಣ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಇ) ಕಳೆದ ಮೂರು ವರ್ಷಗಳಲ್ಲಿ ಈ ಮೂರು ಜಿಲ್ಲೆಗಳಲ್ಲಿ ಹೊಸದಾಗಿ ನಿರ್ಮಾಣ ಮಾಡಲಾದ ಕೆರೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಈ) ಈ ಜಿಲ್ಲೆಗಳಲ್ಲಿ ಕೆರೆಗಳ ನಿರ್ಮಾಣ ಕಾರ್ಯಕ್ಕೆ ಖರ್ಚು ಮಾಡಲಾದ ಹಣ ಎಷ್ಟು? (ಜಿಲ್ಲಾವಾರು ವರ್ಷವಾರು ಮಾಹಿತಿ ನೀಡುವುದು)

ಉ) ಈ ಮೇಲ್ಕಂಡ ಮೂರು ಜಿಲ್ಲೆಗಳಲ್ಲಿರುವ ನದಿ ಹಳ್ಳಗಳಿಗೆ ಕಳೆದ ಮೂರು ವರ್ಷದಲ್ಲಿ ನಿರ್ಮಿಸಲಾಗಿರುವ ಬಂದಾರಗಳ ಸಂಖ್ಯೆ ಎಷ್ಟು? ಹಾಗೂ ಇದಕ್ಕೆ ಖರ್ಚಾದ ಹಣ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :—

ಅ) ಧಾರವಾಡ ಹಾವೇರಿ ಮತ್ತು ಗದಗ್ ಕೆರೆಗಳ ಸಂಖ್ಯೆ ಹಾಗೂ ಕೆರೆಗಳಲ್ಲಿನ ಹೂಳು ತೆಗೆದು ಸಂಖ್ಯೆ ;